ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಬಿ.ಬಿ.ಎಂ.ಪಿ. ವ್ಯಾಪ್ತಿಗೆ ಹೊಸದಾಗಿ ಸೇರ್ಪಡೆಗೊಂಡ ನಗರಸಭೆ ಮತ್ತು ಪುರಸಭೆ ಪ್ರದೇಶಗಳ ಅಭಿವೃದ್ಧಿಗೆ 2016-17ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿರುವ ರೂ.250.00 ಕೋಟಿಗಳ ವೆಚ್ಚದಲ್ಲಿ ಕೈಗೊಳ್ಳುವ ಕಾಮಗಾರಿಗಳಿಗೆ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ: 1. ಸರ್ಕಾರದ ಆದೇಶ ಸಂಖ್ಯೆ: ನಅಇ 199 ಎಸ್‌ಎಫ್‌ಸಿ 2016 (ಭಾಗ-1), ದಿನಾಂಕ: 21-06-2016.

2. ಸರ್ಕಾರದ ಆದೇಶ ಸಂಖ್ಯೆ: ನಅಇ 175 ಎಸ್‌ಎಫ್‌ಸಿ 2016, ದಿನಾಂಕ: 05-07-2016.

3. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಪತ್ರ ಸಂಖ್ಯೆ: ಬಿಬಿಎಂಪಿ/ಆ/ಪಿ.ಎಸ್.ಆರ್.(ಜಿ)/3685/2016-17, ದಿನಾಂಕ: 17-08-2016.

4. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಪತ್ರ ಸಂಖ್ಯೆ: ಆ/ಪಿ.ಆರ್/4568/2016-17, ದಿನಾಂಕ: 18-10-2016.

* * * * *

ಪ್ರಸ್ತಾವನೆ:

ಮೇಲೆ (1) ರಲ್ಲಿ ಓದಲಾದ ದಿನಾಂಕ: 21-06-2016ರ ಆದೇಶದಲ್ಲಿ 2016-17 ಮತ್ತು 2017-18ನೇ ಸಾಲಿನಲ್ಲಿ ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ ವಿವಿಧ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಒಟ್ಟು ರೂ.7300.00 ಕೋಟಿಗಳ ಅಂದಾಜು ವೆಚ್ಚದ ಕಾಮಗಾರಿಗಳಿಗೆ ಅನುಮೋದನೆ ನೀಡಲಾಗಿರುತ್ತದೆ. ಸದರಿ ರೂ.7300.00 ಕೋಟಿಗಳ ಪೈಕಿ ಬಿ.ಬಿ.ಎಂ.ಪಿ. ವ್ಯಾಪ್ತಿಗೆ ಹೊಸದಾಗಿ ಸೇರಿಸಲಾಗಿರುವ 110 ಹಳ್ಳಿಗಳ ಅಭಿವೃದ್ಧಿಗಾಗಿ ರೂ.250.00 ಕೋಟಿಗಳನ್ನು ನಿಗದಿಪಡಿಸಲಾಗಿದ್ದು, ಅದರಂತೆ ಸದರಿ ಮೊತ್ತದ ಕಾಮಗಾರಿಗಳ ಕ್ರಿಯಾ ಯೋಜನೆಗೆ ಸರ್ಕಾರದ ಅನುಮೋದನೆ ಪಡೆಯುವಂತೆ ಆದೇಶಿಸಲಾಗಿದೆ.

2. ಮೇಲೆ (2) ರಲ್ಲಿ ಓದಲಾದ ದಿನಾಂಕ:05-07-2016ರ ಆದೇಶದಲ್ಲಿ 110 ಹಳ್ಳಿಗಳ ಅಭಿವೃದ್ಧಿಗಾಗಿ ರೂ.250.00 ಕೋಟಿಗಳನ್ನು ಕ್ಷೇತ್ರವಾರು ಈ ಕೆಳಕಂಡಂತೆ ವಿಂಗಡಣೆ ಮಾಡಲಾಗಿದೆ.

(ರೂ. ಕೋಟಿಗಳಲ್ಲಿ)

ಕ್ರ.ಸಂ	ಮತ ಕ್ಷೇತ್ರದ ಹೆಸರು	ಅನುದಾನ
.1	ಕೆ.ಆರ್.ಪುರಂ	40.00
2	ಯಶವಂತಪುರ	40.00
3	ರಾಜರಾಜೇಶ್ವರಿನಗರ	40.00
4	ಬ್ಯಾಟರಾಯನಪುರ	40.00
5	ಬೆಂಗಳೂರು ದಕ್ಷಿಣ	15.00
6	ಯಲಹಂಕ	10.00
7	ಮಹದೇವಪುರ	15.00
8	ದಾಸರಹಳ್ಳಿ	10.00

Scanned with CamScanner

9	ಸರ್ವಜ್ಞನಗರ	25.00
10	ಬೊಮ್ಮನಹಳ್ಳಿ	15.00
	ಒಟ್ಟು ಮೊತ್ತ	**250.00**

3. ಆಯುಕ್ತರ ಪ್ರಸ್ತಾವನೆಯನ್ವಯ ಸರ್ಕಾರವು ದಿನಾಂಕ: 05-07-2016ರ ಆದೇಶದಲ್ಲಿ ಈ ಕೆಳಕಂಡ ವಿಧಾನಸಭಾ ಕ್ಷೇತ್ರಗಳ ಕಾಮಗಾರಿಗಳ ಕ್ರಿಯಾ ಯೋಜನೆಗೆ ಅನುಮೋದನೆ ನೀಡಿದೆ.

(ರೂ. ಕೋಟಿಗಳಲ್ಲಿ)

ಕ್ರ.ಸಂ	ಮತ ಕ್ಷೇತ್ರದ ಹೆಸರು	ಕ್ರಿಯಾ ಯೋಜನೆಗೆ ಅನುಮೋದನೆ ನೀಡಿರುವ ಮೊತ್ತ
1	ಕೆ.ಆರ್.ಪುರಂ	40.00
2	ಯಶವಂತಪುರ	40.00
3	ಸರ್ವಜ್ಞನಗರ	25.00
	ಒಟ್ಟು ಮೊತ್ತ	105.00

4. ಮೇಲೆ (3) ರಲ್ಲಿ ಓದಲಾದ ಆಯುಕ್ತರ ದಿನಾಂಕ: 17-08-2016ರ ಪ್ರಸ್ತಾವನೆಯಲ್ಲಿ ದಾಸರಹಳ್ಳಿ ವಿಧಾನಸಭಾ ಕ್ಷೇತ್ರಕ್ಕೆ ನಿಗಧಿಪಡಿಸಿರುವ ರೂ.10.00 ಕೋಟಿಗಳಲ್ಲಿ ರಸ್ತೆ ಅಭಿವೃದ್ಧಿಗೆ ಸಂಬಂಧಿಸಿದಂತೆ ಒಟ್ಟು 25 ಕಾಮಗಾರಿಗಳ ಕ್ರಿಯಾ ಯೋಜನೆಗೆ ಸರ್ಕಾರದ ಅನುಮೋದನೆ ನೀಡುವಂತೆ ಕೋರಿರುತ್ತಾರೆ.

5. ಮೇಲೆ (4) ರಲ್ಲಿ ಓದಲಾದ ಆಯುಕ್ತರ ದಿನಾಂಕ: 10-08-2016ರ ಪ್ರಸ್ತಾವನೆಯಲ್ಲಿ ಬೊಮ್ಮನಹಳ್ಳಿ ವಲಯ ವಿಧಾನಸಭಾ ಕ್ಷೇತ್ರಕ್ಕೆ ನಿಗಧಿಪಡಿಸಿರುವ ರೂ.15.00 ಕೋಟಿಗಳಿಗೆ ಸಂಬಂಧಿಸಿದಂತೆ ಒಟ್ಟು 37 ಕಾಮಗಾರಿಗಳ ಕ್ರಿಯಾ ಯೋಜನೆಗೆ ಸರ್ಕಾರದ ಅನುಮೋದನೆ ನೀಡುವಂತೆ ಕೋರಿರುತ್ತಾರೆ.

6. ದಿನಾಂಕ: 21-06-2016ರ ಆದೇಶದಲ್ಲಿ 2016-17 ಮತ್ತು 2017-18ನೇ ಸಾಲಿನಲ್ಲಿ ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ ವಿವಿಧ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಒಟ್ಟು ರೂ.7300.00 ಕೋಟಿಗಳ ಅಂದಾಜು ವೆಚ್ಚದ ಕಾಮಗಾರಿಗಳಿಗೆ ಅನುಮೋದನೆ ನೀಡಲಾಗಿದ್ದು, ಈಗಾಗಲೇ ಕೆ.ಆರ್.ಪುರಂ, ಯಶವಂತಪುರ ಮತ್ತು ಸರ್ವಜ್ಞನಗರ ವಿಧಾನಸಭಾ ಕ್ಷೇತ್ರಗಳ-ಕ್ರಿಯಾ ಯೋಜನೆಗೆ ಸರ್ಕಾರವು ದಿನಾಂಕ: 05-07-2016ರ ಆದೇಶದಲ್ಲಿ ಅನುಮೋದನೆ ನೀಡಿರುವುದರಿಂದ ಮತ್ತು ಆಯುಕ್ತರು ಸಲ್ಲಿಸಿರುವ ಪ್ರಸ್ತಾವನೆಯನ್ವಯ ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ಹಾಗೂ ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ಕಾಮಗಾರಿಗಳ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲು ಉದ್ದೇಶಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ನಅಇ 175 ಎಸ್‌ಎಫ್‌ಸಿ 2016,
ಬೆಂಗಳೂರು, ದಿನಾಂಕ: 31-12-2016.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಗೆ ಹೊಸದಾಗಿ ಸೇರಿಸಲ್ಪಟ್ಟ 110 ಹಳ್ಳಿಗಳ ಅಭಿವೃದ್ಧಿಗಾಗಿ ನಿಗಧಿಪಡಿಸಿರುವ ರೂ.250.00 ಕೋಟಿಗಳ ಅನುದಾನದಿಂದ ಈ ಕೆಳಕಂಡ ವಿಧಾನಸಭಾ ಕ್ಷೇತ್ರಗಳಲ್ಲಿ ಕೈಗೊಳ್ಳುವ ರೂ.25.00 ಕೋಟಿಗಳ ಅಂದಾಜು ವೆಚ್ಚದ ಕಾಮಗಾರಿಗಳ ಕ್ರಿಯಾ ಯೋಜನೆಗೆ ಈ ಕೆಳಕಂಡ ಷರತ್ತಿಗೊಳಪಟ್ಟು ಸರ್ಕಾರದ ಅನುಮೋದನೆ ನೀಡಲಾಗಿದೆ.

...3.

Scanned with CamScanner

ದಾಸರಹಳ್ಳಿ ವಿಧಾನಸಭಾ ಕ್ಷೇತ್ರ:–

Sl. No.	Name of the work	Est Cost in lakhs
1	Improvements to main and cross road at LV Enclave medarahalli in ward no.12 shettyhalli sub division.	50.00
2	Improvements to main and cross roads at Chowdappa layout near durgaparameshwari Temple medarahalli in ward no.12 shettyhalli sub division.	50.00
3	Improvements to road and drain at RR layout and vinayaka layout in ward no.12 shettyhalli sub division.	50.00
4	Construction of RCC drain at medarahalli main road left side in ward no.12 sheetyhalli sub division.	50.00
5	Improvements to road and drain at Kaveri layout Adrshanagara shetty halli ward no.12 shettyhalli sub division.	50.00
6	Improvements to road and drain at shettyhalli village and Shettyhalli Janatha Colony ward no.12 shettyhalli sub division. 012-17-00028	50.00
7	Improvements to road and drain at AYR layout Byraveshwaranagara in ward no.12 shettyhali sub division.	50.00
8	Improvement to Main road and drain at Shettihalli ward no.12 shettyhalli sub division.	50.00
9	Improvements to road and drain at Surya enclave Abbigere in ward no.12 shettyhalli sub-division.	50.00
10	Improvements to road and drain at Kempegowda Garden and Sapthagiri layout in ward no.12 shettyhalli sub divison.	50.00
11	Improvements to road and drain at Veeranjinappa Layout Abbigere in ward no.12 shettyhalli sub division.	25.00
12	Improvemtns to road and drain at Venkateshwara layout and Lakshmi layout in ward no.12 shettyhalli sub division.	50.00
13	Improvements to road and drain at Karekallu area in ward no.12 shettyhalli sub division.	50.00
14	Improvements to main and cross roads at Babanna layout back side area chikkasandra in ward no.12 shettyhalli sub division	50.00
15	Construction of RCC drain at Chikkasandra Govt school Surrounding areas in ward no.12 shettyhalli sub division	50.00
16	Construction of RCC drain at Chikkasandra Govt schoold Surrounding areas in ward no.12 shettyhalli sub divison	50.00
17	Improvements to road and drain at chikkasandra village in ward no.12 shettyhalli sub division.	25.00
18	Improvements to roads & drains at 4th Cross NMH Layout in Bagalagunte ward no.14, T.Dasarahalli Sub-Division.	20.00
19	Improvements to roads & drains at Navy Laout in Bagalagunte war no 14 T.Dasarahalli Sub-Divison.	20.00
20	Improvements to roads at Soundarya Layout 11th cross connecting to New Extension in Bagalagunte ward No.14 T.Dasarahalli Sub-Division.	30.00

. . . 4 .

Scanned with CamScanner

21	Improvements to drains at Near Byraveshwara Circle 4th, 5th cross roads in Bagalagunte war no.14, T.Dasarahalli Sub-Division.	20.00
22	Construction of Concrete drain at NMH Layout 4th cross to Basava Dhyana Centre in Bagalagunte Ward No.14, T.Dasarahalli Sub-Division	40.00
23	Construction of Concrete drain at 1st cross Bhoomika Layout (Kirloskar Layout 1st Main deadend) in Bagalagunte Ward No.14, T.Dasarahalli Sub-Division.	30.00
24	Improvements to road and drains at Siddeshwara layout in Bagalagunte Ward No.14, T.Dasarahalli Sub-Division	20.00
25	UGD Maintanance in Sidedahalli Village Limit Bagalagunte Ward No.14, T.Dasarahalli Sub-Division	20.00
	Total	**1000.00**

ಬೊಮ್ಮನಪಳ್ಳಿ ವಿಧಾನಸಭಾ ಕ್ಷೇತ್ರ:-

Sl No	Ward	Name of work	Est. cost in Lakhs
1	175	Construction of RCC drain and asphalting from Seema school circle to Devarachikkanahalli bus stop through Royal shelters and surrounding area of Bommanahalli	100.00
2	175	Construction of RCC drain and asphalting in Virat Nagar main road and surrounding area	100.00
		TOTAL	**200.00**
3	188	Providing RCC drain and Asphalting to roads in Raghavendra colony and HC colony of Bilekahalli	40.00
4	188	Providing RCC drain and Asphalting to roads to Vijayashree layout and Rotary Nagar	45.00
5	188	Asphalting to roads in Kumba lake city and Vakil Marina layout	45.00
6	188	Providing RCC drain and CC roads to Kodichikkanahalli village	20.00
		TOTAL	**150.00**
7	189	Construction of RCC drain in Chamundeshwari Nagar	30.00
8	189	Construction of RCC drain in Srinivasa Reddy layout and MSR Layout	80.00
9	189	Construction of RCC drain in Kakappa Layout	15.00
10	189	Construction of RCC drain and CC road in Silk board colony	25.00
11	189	Construction of RCC drain in Krishna Reddy layout	25.00
12	189	Construction of RCC drain, CC road and Asphalting to road in Adarsha Layout	25.00
13	189	Construction of RCC drain and Asphalting to road in Pragati Nagar	20.00
14	189	Construction of RCC drain, CC road and Asphalting to road in Vinayaka Layout	35.00

Scanned with CamScanner

15	189	Construction of RCC drain and CC road in cross roads of Garvebavipalya road	15.00
16	189	Construction of RCC drain and Asphalting to Venkataramanaswamy temple road in ward No. 189 Hongasandra	50.00
17	189	Construction of RCC drain and CC road in Madina Nagar near behind Khaza Masjid	45.00
18	189	Construction of RCC drain and Asphalting to 8th cross and surrounding area of Madina Nagar	50.00
19	189	Construction of RCC drain in 3rd Main From SWD to road connecting to Aisha Masjid in Madina Nagar comes under ward No. 190 Mangammanapalya Jurisdiction	35.00
		TOTAL	**450.00**
20	186	Providing Asphalting Around Jaraganahalli Main Road and Grama tana Roads At Jaraganahalli	50.00
21	186	Providing Asphalting Around Govindappa Layout, Annaiappa Layout and Munisanjevappa layout At Jaraganahalli	50.00
		TOTAL	**100.00**
22	187	Construction of CC Drain at Main Road S.M.S Layout in ward no 187 Puttenahalli	28.00
23	187	Construction of CC Drain at 18th main S.M.S Layout in ward no 187 Puttenahalli	26.55
24	187	Construction of CC Drain at 20th A Main Kapila Road in ward no 187 Puttenahalli	26.55
25	187	Construction of CC Drain at S.M.S Layout Main_Road to Gowramma Layout in ward no 187 Puttenahalli	18.90
		TOTAL	**100.00**
26	193	Improvements to Drain and Flagging Course, Covering Slab, and Construction of Culverts Ragavendra layout Cross Roads	38.00
27	193	Improvements to Drain and Flagging Course, Covering Slab, and Construction of Culverts Ragavendra layout Main Road and Mother Terasa School Road	28.00
28	193	Improvements to Drain and Flagging Course, Covering Slab, and Construction of Culverts Krishna layout 7th Main, 8th Main and Croses	35.00
29	193	Improvements to Drain and Covering Slab,and Construction of Culverts Sugama Layout Left Side Croses	25.00
30	193	Improvements to Roads and Drain, Covering Slab, and Construction of Culverts Vishya bank layout Cross Roads	48.00
31	193	Improvements to Roads and Drain, Covering Slab, and Construction of Culverts Shanthi nikethan layout Cross Roads Near 11th main	26.00
		TOTAL	**200.00**
32	174	Improvement to road, drain and culverts at 16th "A" cross 5th main at 6th sector HSR Layout	30.00

Scanned with CamScanner

33	174	Improvement to road, drain and culverts at 18th cross at 6th sector HSR Layout	30.00
34.	174	Improvement to road, drain and culverts at 18th cross, 9th main to 14th main road at 6th sector HSR Layout	30.00
35	174	Improvement to drain 25th cross, 17th main to 18th main at 2nd sector HSR layout	30.00
36	174	Improvement to drain 14th cross, 15th main to 15th "A" main road at 4th sector HSR Layout	30.00
		TOTAL	150.00
37	191	Improvements to drainand roads in Ambedkar colony and surrounding layouts of Chikkabegur in ward No. 191	150.00
		TOTAL	150.00
		GRAND TOTAL	1500.00

ಷರತ್ತುಗಳು:-

1. ಈ ಆದೇಶದಲ್ಲಿ ನೀಡಿರುವ ಅನುಮೋದನೆಯು ಕಾಮಗಾರಿಗಳ ಪಟ್ಟಿಗೆ ನೀಡಿರುವ ಅನುಮೋದನೆಯೇ ಹೊರತು, ಕಾಮಗಾರಿಗಳ ಅಂದಾಜು ಪಟ್ಟಿಗಳಿಗೆ ನೀಡಿರುವ ಆಡಳಿತಾತ್ಮಕ ಅನುಮೋದನೆಯಲ್ಲ. ಆದ್ದರಿಂದ, ಅನುಮೋದನೆಗೊಂಡ ಕಾಮಗಾರಿಗಳಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಡಿಪಿಆರ್‌ಗಳನ್ನು ಸಿದ್ಧಪಡಿಸಿ, ಸಕ್ಷಮ ಪ್ರಾಧಿಕಾರಗಳಿಂದ ತಾಂತ್ರಿಕ ಅನುಮೋದನೆ ಪಡೆದು, ರೂ.10.00 ಕೋಟಿಗಳಿಗೆ ಕಡಿಮೆ ಇರದಂತೆ ಪ್ಯಾಕೇಜ್‌ಗಳನ್ನು ಮಾಡಿ, ಸದರಿ ಪ್ಯಾಕೇಜ್ ಕಾಮಗಾರಿಗಳನ್ನು ಕರ್ನಾಟಕ ಸಾರ್ವಜನಿಕ-ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮಗಳು-2000, ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಆಸುಇ 20 ಇಜಿವಿ 2009 (4), ದಿನಾಂಕ: 13-07-2009 ರಲ್ಲಿನ ಎಲ್ಲಾ ಅಂಶಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ಬಿ.ಬಿ.ಎಂ.ಪಿ. ವತಿಯಿಂದ ಟೆಂಡರ್ ಪ್ರಕ್ರಿಯೆಯನ್ನು ಇ-ಪ್ರಕ್ಯೂರ್‌ಮೆಂಟ್ ಮೂಲಕ ಕಡ್ಡಾಯವಾಗಿ ಕೈಗೊಳ್ಳತಕ್ಕದ್ದು.

2. ಈ ಯೋಜನೆಯ ಎಲ್ಲಾ ಕಾಮಗಾರಿಗಳಿಗೆ ಸಂಬಂಧಿಸಿದಂತೆ ರೂ.10.00 ಕೋಟಿಗಳಿಗೆ ಕಡಿಮೆ ಇಲ್ಲದಂತೆ, ಪ್ಯಾಕೇಜ್‌ವಾರು ಕಾಮಗಾರಿಗಳನ್ನು ಮಾಡಿ, ಮೇಲೆ ಓದಲಾದ (4)ರ ಆದೇಶದಲ್ಲಿ ರಚಿಸಲಾದ ಅಧಿಕಾರಯುಕ್ತ ಸಮಿತಿಯಿಂದ ಹಾಗೂ ರಾಜ್ಯ ಸರ್ಕಾರದಿಂದ ಅನುಮೋದನೆ ಪಡೆದು ಅನುಷ್ಠಾನಗೊಳಿಸತಕ್ಕದ್ದು.

3. ಈ ಕ್ರಿಯಾ ಯೋಜನೆಯಲ್ಲಿ ತೆಗೆದುಕೊಳ್ಳಲಾಗಿರುವ ಕಾಮಗಾರಿಗಳು ಇತರೆ ಯಾವುದೇ ಯೋಜನೆ/ಅನುದಾನದಡಿಯಲ್ಲಿ ಪುನರಾವರ್ತನೆಯಾಗಿರುವುದಿಲ್ಲ ಎಂಬ ಬಗ್ಗೆ ಆಯುಕ್ತರು, ಬಿ.ಬಿ.ಎಂ.ಪಿ.ರವರು ಪೂರ್ವಾನ್ವಯವಾಗಿ ಖಚಿತಪಡಿಸಿಕೊಳ್ಳತಕ್ಕದ್ದು.

4. ಅನುಮೋದನೆ ನೀಡಲಾದ ಕ್ರಿಯಾಯೋಜನೆಯಂತೆ ಕಾಮಗಾರಿಗಳನ್ನು ಅನುಷ್ಠಾನಗೊಳಿಸತಕ್ಕದ್ದು. ಅನಿವಾರ್ಯ ಕಾರಣಗಳಿಂದ ಬದಲಾವಣೆಗಳು ಅತ್ಯಂತ ಅವಶ್ಯಕ ಎಂದು ಕಂಡುಬಂದಲ್ಲಿ ಅಂತಹ ಕಾಮಗಾರಿಗಳನ್ನು ಸೂಕ್ತ ಸಮಜಾಯಿಷಿಯೊಂದಿಗೆ ಆಯುಕ್ತರು, ಬಿ.ಬಿ.ಎಂ.ಪಿ. ಇವರು ಅನುಮೋದನೆಗಾಗಿ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

...7.

Scanned with CamScanner

5. ಮೇಲೆ ಓದಲಾದ (4)ರ ಆದೇಶದಲ್ಲಿ ರಚಿಸಲಾಗಿರುವ ಅಧಿಕಾರಯುಕ್ತ ಸಮಿತಿಯು ಈ ಆದೇಶದಲ್ಲಿ ಅನುಮೋದಿಸಲಾದ ಕಾಮಗಾರಿಗಳ ಪ್ರಗತಿ ಪರಿಶೀಲನೆಯನ್ನು ಆಗಿಂದ್ದಾಗೆ ನಡೆಸತಕ್ಕದ್ದು.

6. ಕಾಮಗಾರಿಗಳ ಗುಣಮಟ್ಟದ ಬಗ್ಗೆ ಸಂಬಂಧಪಟ್ಟ ಬಿ.ಬಿ.ಎಂ.ಪಿ.ಯ ಪ್ರಧಾನ ಅಭಿಯಂತರರು ಹಾಗೂ ಮುಖ್ಯ ಅಭಿಯಂತರರು ನಿಗಾವಹಿಸಿ, ಉತ್ತಮ ಗುಣಮಟ್ಟದ ಆಸ್ತಿ ಸೃಜನೆಗೆ ಕಟ್ಟುನಿಟ್ಟಿನ ಕ್ರಮವಹಿಸತಕ್ಕದ್ದು.

7. ಆಯುಕ್ತರು, ಬಿ.ಬಿ.ಎಂ.ಪಿ.ರವರು ಕಾಮಗಾರಿಗಳ ಗುಣಮಟ್ಟದ ಬಗ್ಗೆ ಪ್ರತಿಷ್ಠಿತ ಸಂಸ್ಥೆಗಳಿಂದ ಗುಣಮಟ್ಟದ ತಪಾಸಣಾ ಕೈಗೊಂಡು ವರದಿಯನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

8. ಅನುಮೋದಿತ ಕಾಮಗಾರಿಗಳನ್ನು 2016-17 ಮತ್ತು 2017-18ನೇ ಸಾಲಿನಲ್ಲಿ ನಗರೋತ್ಥಾನ, ವಿಶೇಷ ಮೂಲಭೂತ ಸೌಕರ್ಯಕ್ಕೆ ಬಂಡವಾಳ ಬೆಂಬಲ ಮತ್ತು ಸರೋವರ ಅಭಿವೃದ್ಧಿ ಯೋಜನೆಯ ಅನುದಾನಗಳಡಿ ಅನುಷ್ಠಾನಗೊಳಿಸುವುದು.

9. ಈ ಆದೇಶದಲ್ಲಿ, ಅನುಮೋದನೆ ನೀಡಿರುವ ಮೊತ್ತಕ್ಕಿಂತ ಕಾಮಗಾರಿಗಳ ಅನುಷ್ಠಾನ ಮೊತ್ತವು ಹೆಚ್ಚುವರಿಯಾದಲ್ಲಿ ಸದರಿ ಹೆಚ್ಚುವರಿ ಅನುದಾನವನ್ನು ಬಿ.ಬಿ.ಎಂ.ಪಿ.ಯು ತನ್ನ ಸ್ವಂತ ಅನುದಾನದಿಂದ ಭರಿಸತಕ್ಕದ್ದು. ಸರ್ಕಾರದಿಂದ ಹೆಚ್ಚುವರಿ ಅನುದಾನವನ್ನು ಒದಗಿಸಲಾಗುವುದಿಲ್ಲ.

10. ಈ ಆದೇಶದಲ್ಲಿ, ಅನುಮೋದನೆ ನೀಡಿರುವ ಕಾಮಗಾರಿಗಳ ಅನುಷ್ಠಾನ ವೇಳಾಪಟ್ಟಿಯನ್ನು ಆಯುಕ್ತರು, ಬಿ.ಬಿ.ಎಂ.ಪಿ.ರವರು ತಯಾರಿಸಿ, ಸರ್ಕಾರಕ್ಕೆ ಸಲ್ಲಿಸತಕ್ಕದ್ದು ಹಾಗೂ ಕಾಮಗಾರಿಗಳ ಪ್ರಗತಿ ವರದಿಯನ್ನು ಪ್ರತಿ ಮಾಹೆ ಎಂಪಿಕ್ ಸಭೆಗೆ ಸರ್ಕಾರಕ್ಕೆ ತಪ್ಪದೆ, ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಕೆ. ಜಗದೀಶ್ ಬಾಬು)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ (ಬಿ.ಬಿ.ಎಂ.ಪಿ.)

ಇವರಿಗೆ:

1. ಮಹಾಲೇಖಪಾಲರು, ಲೆಕ್ಕ ತಪಾಸಣೆ /ಲೆಕ್ಕ ಪತ್ರ ಬೆಂಗಳೂರು, ಕರ್ನಾಟಕ.
2. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು
3. ಪ್ರಧಾನ ಅಭಿಯಂತರರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
4. ಎಲ್ಲಾ ಮುಖ್ಯ ಅಭಿಯಂತರರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
5. ಮುಖ್ಯ ಲೆಕ್ಕಾಧಿಕಾರಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
6. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ.
7. ಶಾಪಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

Scanned with CamScanner